UASB
LIBRARY
Newspaper Clippings
Pg .1 Monday 19-04-2021 Jai Kisan



ಹಳೆ ದರದಲ್ಲಿಯೇ ರಸಗೊಬ್ಬರ ಮಾರಾಟ: ಬಿ.ಸಿ.ಪಾಟೀಲ್ ಸ್ಪಷ್ಟನೆ

■ ವಿಕ ಸುದ್ದಿಲೋಕ ಬೆಂಗಳೂರು

ಕೇಂದ್ರದ ಸೂಚನೆಗೆ ವಿರುದ್ಧವಾಗಿ ರಾಜ್ಯ ಕೃಷಿ ಇಲಾಖೆ ಯಾವುದೇ ಆದೇಶ ಹೊರಡಿಸಿಲ್ಲ ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ್ ಟ್ವೀಟ್ ನಲ್ಲಿ ಸ್ಪಷ್ಟಪಡಿಸಿದ್ದಾರೆ.

''ದಾಸ್ತಾನಿರುವ ಹಳೆಯ ರಸಗೊಬ್ಬರವನ್ನು ಹಳೆಯ ದರದಲ್ಲಿಯೇ ಮಾರಾಟ ಮಾಡಬೇಕು ಎಂಬ ಕೇಂದ್ರ ಸರಕಾರದ ಸೂಚನೆಗೆ ತದ್ವಿರುದ್ಧವಾಗಿ ರಾಜ್ಯ ಕೃಷಿ ಇಲಾಖೆ ಆದೇಶ ಹೊರಡಿಸಿದೆ ಎಂದು ಮಾಜಿ ಸಿಎಂ ಸಿದ್ದರಾಮಯ್ಯ ಮಾಡಿರುವ ಟ್ವೀಟ್ ಶುದ್ಧ ಸುಳ್ಳು. ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ಕೇಂದ್ರ ಸಚಿವ ಡಿ.ವಿ. ಸದಾನಂದಗೌಡರ ಹೇಳಿಕೆಗೆ ವಿರುದ್ಧವಾಗಿ ಯಾವುದೇ ಆದೇಶವನ್ನೂ ರಾಜ್ಯ ಕೃಷಿ ಇಲಾಖೆ ಹೊರಡಿಸಿಲ್ಲ,'' ಎಂದು ಪಾಟೀಲ್ ಹೇಳಿದ್ದಾರೆ.



ಪತ್ರಿಕಾ ಪ್ರಕಟಣೆ ಬಿಡುಗಡೆ ಮಾಡಿರುವ ಅವರು ''ಹಳೆಯ ರಸಗೊಬ್ಬರ ದಾಸ್ತಾನನ್ನು ಹಳೆಯ ದರದಲ್ಲೇ ಮಾರಾಟ ಮಾಡಬೇಕೆಂದು ರಸಗೊಬ್ಬರ ಮಾರಾಟಗಾರರಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಈ ಬಗ್ಗೆ ವ್ಯಾಪಕ ಪ್ರಚಾರ ಕೈಗೊಳ್ಳಲಾಗಿದೆ. ಆದರೆ, ಸುಳ್ಳು ಹೇಳಿಕೆ ನೀಡುವ ಮೂಲಕ ಸಿದ್ದರಾಮಯ್ಯ ರಾಜ್ಯದ ರೈತರ ದಿಕ್ಕು ತಪ್ಪಿಸುತ್ತಿದ್ದಾರೆ,'' ಎಂದು ಟೀಕಿಸಿದ್ದಾರೆ.

''ಏಪ್ರಿಲ್‌ನಲ್ಲಿ 77920 ಮೆಟ್ರಿಕ್ ಟನ್ ಡಿ.ಎ.ಪಿ ರಸಗೊಬ್ಬರಕ್ಕೆ ಬೇಡಿಕೆಯಿದೆ. ಈ ಮೊದಲಿನ ಹಳೆಯ ದಾಸ್ತಾನು ಒಳಗೊಂಡು 1,25,860 ಮೆಟ್ರಿಕ್ ಟನ್ ಸಂಗ್ರಹವಿದೆ. ಮುಂಗಾರು ಹಂಗಾಮಿನ ಕಾಂಪ್ಲೆಕ್ಸ್ ರಸಗೊಬ್ಬರಗಳ ಒಟ್ಟು ಬೇಡಿಕೆ 10.03 ಲಕ್ಷ ಮೆಟ್ರಿಕ್ ಟನ್ ಇದ್ದು, 5.19 ಲಕ್ಷ ಮೆಟ್ರಿಕ್ ಟನ್ ಸಂಗ್ರಹವಿದೆ,'' ಎಂದು ಬಿ.ಸಿ.ಪಾಟೀಲ್ ತಿಳಿಸಿದ್ದಾರೆ.

19-04-2021 Vk Pg 04

ಕೇಂದ್ರದ ಸೂಚನೆ ವಿರುದ್ಧ ಆದೇಶ ಹೊರಡಿಸಿಲ್ಲ: ಬಿಸಿಪಿ

ಬೆಂಗಳೂರು: ಕೇಂದ್ರದ ಸೂಚನೆಯ ವಿರುದ್ಧ ರಾಜ್ಯ ಕೃಷಿ ಇಲಾಖೆ ಯಾವುದೇ ಆದೇಶ ಹೊರಡಿಸಿಲ್ಲ ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ್ ಸ್ಪಷ್ಟಪಡಿಸಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಟ್ವೀಟ್ ಮೂಲಕ ಹೇಳಿರುವ ಹಳೆಯ ದಾಸ್ತಾನಿನ ರಸಗೊಬ್ಬರವನ್ನು ಹಳೆಯ ದರದಲ್ಲಿ ಮಾರಾಟ ಮಾಡಬೇಕೆಂಬ ಕೇಂದ್ರ ಸರ್ಕಾರದ ಸೂಚನೆಗೆ ತದ್ವಿರುದ್ಧವಾಗಿ ರಾಜ್ಯ ಕೃಷಿ ಇಲಾಖೆ ಆದೇಶ ಹೊರಡಿಸಿದೆ ಎಂಬುದು ಶುದ್ಧ ಸುಳ್ಳಾಗಿದ್ದು, ಕೇಂದ್ರ ಸಚಿವ ಡಿ.ವಿ.ಸದಾನಂದಗೌಡರ ಹೇಳಿಕೆ ವಿರುದ್ಧ ಯಾವುದೇ ಆದೇಶ ರಾಜ್ಯ ಕೃಷಿ ಇಲಾಖೆ ಹೊರಡಿಸಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.



ಹಳೆಯ ರಸಗೊಬ್ಬರ ದಾಸ್ತಾನನ್ನು ಹಳೆಯ ದರದಲ್ಲೇ ಮಾರಾಟ ಮಾಡಬೇಕೆಂದು ಮಾರಾಟಗಾರರಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಈ ಬಗ್ಗೆ ವ್ಯಾಪಕ ಪ್ರಚಾರ ಸಹ ಮಾಡಲಾಗುತ್ತಿದೆ. ಆದರೆ, ಇಲ್ಲಸಲ್ಲದ ಹೇಳಿಕೆಗಳನ್ನು ನೀಡುವ ಮೂಲಕ ಸಿದ್ದರಾಮಯ್ಯ ರಾಜ್ಯದ ರೈತರ ದಿಕ್ಕುತಪ್ಪಿಸುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

ಏಪ್ರಿಲ್ ತಿಂಗಳಲ್ಲಿ ಡಿಎಪಿ ರಸಗೊಬ್ಬರಕ್ಕೆ ಬೇಡಿಕೆ 77920 ಮೆ.ಟನ್ ಇದ್ದು, ಈಗಾಗಲೇ 125860 ಮೆ.ಟನ್ ದಾಸ್ತಾನಿದೆ. ಮುಂಗಾರು ಹಂಗಾಮಿನ (ಏಪ್ರಿಲ್ ನಿಂದ ಸೆಪ್ಟೆಂಬರ್ ವರೆಗೆ) ಕಾಂಪ್ಲೆಕ್ಸ್ (ಎನ್.ಪಿ.ಕೆ) ರಸಗೊಬ್ಬರಗಳ ಒಟ್ಟು ಬೇಡಿಕೆ 10.03 ಲಕ್ಷ ಮೆ.ಟನ್ ಇದ್ದು ಏಪ್ರಿಲ್ ತಿಂಗಳ ಬೇಡಿಕೆ 1.68 ಲಕ್ಷ ಮೆ.ಟನ್ ಇದೆ. ಈಗಾಗಲೇ 5.19 ಲಕ್ಷ ಮೆ.ಟನ್ ದಾಸ್ತಾನಿದೆ. ರಸಗೊಬ್ಬರ ಮಾರಾಟಗಾರರು ಯಾವುದೇ ಕಾರಣಕ್ಕೂ ದಾಸ್ತಾನು ಇರುವ ಹಳೆಯ ರಸಗೊಬ್ಬರವನ್ನು ಹೊಸದರದಲ್ಲಿ ವಿತರಿಸದೇ ಹಳೆಯ ದಾಸ್ತಾನನ್ನು ಹಳೆಯ ದರದಲ್ಲಿಯೇ ಮಾರಾಟ ಮಾಡಬೇಕೆಂದು ಬಿ.ಸಿ. ಪಾಟೀಲ್ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

19-04-2021 Uv Pg 07

ರೈತರ ಶ್ರಮಕ್ಕೆ ಯಾವುದೇ ಬೆಲೆ ಇಲ್ಲ: ಮಧ್ಯವರ್ತಿಗಳ ಹಾವಳಿ ಇನ್ನೂ ತಪ್ಪಿಲ್ಲ

ಬೆಲೆ ಕಳೆದುಕೊಂಡ ಟೊಮೆಟೊ ಬೆಳೆ

◆ ವೆಂಕಟೇಶ ದೇಸಾಯಿ

ಬಳ್ಳಾರಿ: ಕೊರೋನಾ ಬಳಿಕ ರೈತರ ಬೆಳೆಗೆ ಸೂಕ್ತ ಬೆಲೆ ಸಿಗುತ್ತಿಲ್ಲ. ಆದರಲ್ಲಿ ಟೊಮೆಟೊ ಬೆಳೆಗೆ ಬೆಲೆ ಕುಸಿತ ದಿಂದಲ ರೈತರೂ ಕೂಡ ಕಂಗಲಾಗಿದ್ದಾರೆ.

ಮೊದಲ ಅಲೆಯಿಂದ ತತ್ತರಿಸಿದ್ದ ರೈತ ಸಮೂಹ ಆರ್ಥಿಕವಾಗಿ ಚೇತರಿಸಿಕೊಳ್ಳುತ್ತಿತ್ತು. ಇದೀಗ ಎರಡನೇ ಅಲೆಯಿಂದಾಗಿಮತ್ತಷ್ಟುಆರ್ಥಿಕಸಂಕಷ್ಟಕ್ಕೆಸಿಲುಕುವಂತಾಗಿದೆ. ಮಾರುಕಟ್ಟೆಯಲ್ಲಿ ಟೊಮೆಟೊಗೆ ಕೇವಲ ಕೇಜಿಗೆ ಐದು ರೂ. ಇದೆ. ಇದರಿಂದ ರೈತರು ಬೆಳೆ ಬೆಳೆಯಲು ಖರ್ಚು ಮಾಡಿದ ಹಣವೂ ಇಲ್ಲದೆ ಬರಿಗೈಯಲ್ಲಿ ತೆರಳುವಂತಾಗಿದೆ.

ನಿರಾಸರಾದ ರೈತರು ರಸ್ತೆಗೆ ಚಲ್ಲಿದರು: ಕುರಗೊಡು, ಮೊಳಕಾಲ್ಮೂರು, ಸಿರಿಗೇರಿ ಸೇರಿದಂತೆ ವಿವಿಧಯಿಂದ ರೈತರು ಮಾರುಟ್ಟೆಗೆ ಟೊಮೆಟೊವನ್ನು ತಂದಿದ್ದರು. ಆದರೆ, ಇದ್ದಕ್ಕಿದ್ದ ಹಾಗೆ ಬೆಲೆ ಕುಸಿತ ಉಂಟಾಗಿರುವುದನ್ನು ಕಂಡು ಕಂಗಾಲಾದರು. ಸರಕಾರ ಸೂಕ್ತ ಮಾರುಕಟ್ಟೆ ವ್ಯವಸ್ಥೆ ಮಾಡದ ಕಾರಣ ಬೇಡಿಕೆ ಇಲ್ಲದಿರುವುದು ರೈತರ ಕಿಚ್ಚಿಗೆ ಕಾರಣವಾಯಿತು. ಮಾರುಕಟ್ಟೆ ಆವರಣದಲ್ಲಿನ ರಸ್ತೆಗೆ ಟೊಮೆಟೋ ಸುರಿದು ಪ್ರತಿಭಟಿಸಿ ತಮ್ಮ ಆಕ್ರೋಶಭ ವ್ಯಕ್ತಪಡಿಸಿದರು.



ಎಕರೆಗೆ ಕೇವಲ ನೂರು ಆದಾಯ: ಮೊಣಕಾಲ್ಮೂರು ತಾಲೂಕಿನ ಕೊನಸಾಗರ್ ಗ್ರಾಮದ ರೈತರಾದ ರಾಜು ಹಾಗೂ ತಿಪ್ಪೆಸ್ವಾಮಿ ಅವರು ಮಾತನಾಡಿ, ಪ್ರತಿ ಎಕರೆಗೆ ಸಾವಿರಾರು ರೂ.ಖರ್ಚು ಮಾಡಿ ಬೆಳೆದ ಟೊಮೆಟೊವನ್ನು ದಲ್ಲಾಳಿಗಳು ತೀರಾ ಕಡಿಮೆ ದರದಲ್ಲಿ ಖರೀದಿಸುತ್ತಾರೆ. ಎಲ್ಲ ಸೇರಿ 100ರೂ. ಆದಾಯ ತೋರಿಸುತ್ತಿದ್ದಾರೆ. ಮಾರಾಟ ಮಾಡುವ ಬದಲು ಜಾನುವಾರು ತಿನ್ನಲಿ ಎಂದು ಎಪಿಎಂಸಿ ಆವರಣದಲ್ಲೇ ಹಾಕಿದ್ದಾರೆ.

ಶ್ರಮಕ್ಕೆ ಸಿಗದ ಬೆಲೆ: ನಾವು ಸುಮಾರು ಕಿ.ಮೀ.ದೂರದಿಂದ ಇಲ್ಲಿಗೆ 129 ಬಾಕ್ಸ್‌ಗಳನ್ನು ತಂದಿದ್ದೆವು. ವಾಹನ ಬಾಡಿಗೆ, ಕೂಲಿ ಖರ್ಚು ತೆಗೆದರೆ ನಮಗೆ ಉಳಿದಿದೆ. ನೂರು ರೂ. ಸಾವಿರಾರು ಖರ್ಚು ಮಾಡಿ ಬೆಳೆ ಬೆಳೆದಿದ್ದೇವೆ. ನಮ್ಮ ಪಾಡು ಯಾರೂ ಕೇಳೋಲ್ಲ, ದೇವರೇ ಕಾಪಾಡಬೇಕೆಂದು ರೈತರು ನಿರಾಸೆ ವ್ಯಕ್ತಪಡಿಸಿದರು.

ಕಳೆದ ಸಾಲಿಗಿಂತಲೂ ಬೆಲೆ ಕುಸಿತ

ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಇಳುವರಿ ಉತ್ತಮವಾಗಿದೆ.ಆದರೆ ದರವಿಲ್ಲ. ದಿನಕ್ಕೆ ಒಬ್ಬ ಕಾರ್ಮಿಕನಿಗೆ 250 ಕೂಲಿ ನೀಡಬೇಕಿದೆ. ರಸಗೊಬ್ಬರ, ಕ್ರಿಮಿನಾಶಕ ಔಷಧಿ ಸೇರಿ ಸಾವಿರಾರು ರೂ.ಖರ್ಚಾಗುತ್ತದೆ. ನಮಗಿಂತ ದಲ್ಲಾಳಿಗಳಿಗೆ ಹೆಚ್ಚು ಲಾಭ. ಈ ವ್ಯವಸ್ಥೆ ಬದಲಾಗಬೇಕೆಂದು ಕೊನಸಾಗರ್ ಗ್ರಾಮದ ರೈತ ರಾಜು ಆಗ್ರಹಿಸಿದರು.

"ನಾವು ರೈತರ ಪರವಾಗಿದ್ದೇವೆ ಎಂದು ರಾಜಕೀಯ ಪಕ್ಷಗಳ ನಾಯಕರು ಹೇಳುತ್ತಾರೆ. ಆದರೆ, ಅದು ಸಭೆ ಸಮಾರಂಭಕ್ಕೆ ಅಷ್ಟೇ ಮೀಸಲು. ಚುನಾವಣೆ ವೇಳೆ ನಮ್ಮಿಂದ ಮತ ಪಡೆಯುವರು. ಗೆಲುವು ಸಾಧಿಸಿದ ಬಳಿಕ ನೀವ್ಯಾರು ಅಂತಾರೆ. ನಮ್ಮ ಗೋಳು ಕೇಳುವರೇ ಇಲ್ಲ.

■ ತಿಪ್ಪೇಸ್ವಾಮಿ, ಮೊಳಕಾಲ್ಮೂರಿನ ರೈತ

19-04-2021 Hd Pg 02

"Turn the pain into power"

UASB
LIBRARY
Newspaper Clippings
Pg .2 Monday 19-04-2021 Jai Kisan



ಕಬ್ಬು ಬೆಳೆವವರಿಗೆ ಕಿವಿಮಾತು

■ ಬಸವರಾಜ ಶಿವಪ್ಪ ಗಿರಗಾಂವಿ

ರೈತರಿಗೆ ಸಲಹೆ

ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ಕಬ್ಬು ನಾಟಿ ಮಾಡಲು ಭೂಮಿಯನ್ನು ಹದಗೊಳಿಸುವ ಕೃಷಿ ಚಟುವಟಿಕೆಗಳು ಗರಿಗೆದರುತ್ತವೆ. ಭಾರತದಲ್ಲಿ ಕಬ್ಬು ಬೆಳೆ 2ನೇ ಅತಿ ದೊಡ್ಡ ವಾಣಿಜ್ಯ ಬೆಳೆಯಾಗಿದೆ. ದೇಶದಲ್ಲಿ 50 ಲಕ್ಷ ಹೆಕ್ಟರ್ ಭೂ ಪ್ರದೇಶದಲ್ಲಿ ಕಬ್ಬು ಬೆಳೆಯಲಾಗುತ್ತಿದೆ. ಆದರೆ ಈಚಿನ ದಿನಗಳಲ್ಲಿ ಮಣ್ಣಿನ ಆರೋಗ್ಯವನ್ನು ಪರೀಕ್ಷಿಸದೇ ಕೃಷಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ. ಮಣ್ಣಿನಲ್ಲಿ ಯಾವ ಪೋಷಕಾಂಶಗಳು ಅಧಿಕವಾಗಿವೆ ಮತ್ತು ಕೊರತೆಯಾಗಿವೆ ಎಂಬುದನ್ನು ತಿಳಿಯದೇ ನೆರೆಯ ರೈತರೊಂದಿಗಿನ ಪೈಪೋಟಿ ಮತ್ತು ಹೆಚ್ಚು ಬೆಳೆ ಪಡೆಯಬೇಕೆಂಬ ದುರಾಸೆಯಿಂದ ಯಥೇಚ್ಛವಾಗಿ ನೀರು ಹಾಗೂ ರಸಗೊಬ್ಬರ ಬಳಸಲಾಗುತ್ತಿದೆ.



ಇದರಿಂದ ಮಣ್ಣಿನ ಆರೋಗ್ಯ ಹಾಳಾಗಿ ಇಳುವರಿ ಕಡಿಮೆಯಾಗುತ್ತಿದೆ.

ಇಂಥ ಸಂದರ್ಭದಲ್ಲಿ ಈ ಕಡೆಯಲ್ಲಿ ಭೂಮಿಯ ಫಲವತ್ತತೆಯನ್ನೂ ಕಾಪಾಡಿಕೊಳ್ಳಬೇಕು, ಆ ಕಡೆ ಹೆಚ್ಚು ಇಳುವರಿಯನ್ನೂ ಪಡೆಯಬೇಕು ಅನ್ನುವವರು, ಈ ಕೆಳಗಿನ ಮಾರ್ಗದರ್ಶಿ ಸೂತ್ರಗಳನ್ನು ಪಾಲಿಸಬೇಕು.

■ ಕಬ್ಬು ನಾಟಿಗೂ ಮೊದಲು ಪ್ರತಿ ಎಕರೆಗೆ 25 ಕೆ.ಜಿ. ಸೆಣಬು ಅಥವಾ ಡೈಂಚಾ ಹಸಿರೆಲೆಗೊಬ್ಬರಗಳನ್ನು ಬಿತ್ತನೆ ಮಾಡಿ 45 ದಿನಗಳ ನಂತರ ಮೊಗ್ಗು ಹೊಡೆದು ಮಣ್ಣಿನಲ್ಲಿ ಹದವಾಗಿ ಮಿಶ್ರಣಗೊಳಿಸಬೇಕು.

■ 90 ದಿನಗಳ ನಂತರ ಸಾಲು ಒಡೆಯುವಾಗ 10 ಕೆ.ಜಿ. ಅಜೋಸ್ಪೆರಿಲಂ , 10 ಕೆ.ಜಿ.ರಂಜಕ ಕರಗಿಸುವ ಅಣುಜೀವಿ ಗೊಬ್ಬರಗಳಿಂದ ಪುಷ್ಟೀಕರಿಸಿದ 8 ಟನ್ ಸಾವಯವ ಗೊಬ್ಬರ ಮತ್ತು 2 ಟನ್ ಎರೆಗೊಬ್ಬರವನ್ನು ಸಾಲಿನ ಎರಡೂ ಮಗ್ಗುಲಿಗೆ ಹಾಕಬೇಕು.

■ ಯಾವುದೇ ಕಾರಣಕ್ಕೂ ಕಬ್ಬಿನೊಂದಿಗೆ ಗೋವಿಜೋಳ ಸೇರಿದಂತೆ ಏಕದಳ ಬೆಳೆಗಳನ್ನು ಬೆಳೆಯಬಾರದು ಕಾರಣ, ಈ ಏಕದಳ ಬೆಳೆಗಳು ತಮ್ಮ ಅಲ್ಪ ಜೀವಿತಾವಧಿಯಲ್ಲಿಯೇ ಪೋಷಕಾಂಶಗಳನ್ನು ಉಪಯೋಗಿಸಿ ವಾರ್ಷಿಕ ಬೆಳೆಯಾದ ಕಬ್ಬಿಗೆ ಪೋಷಕಾಂಶಗಳ ಕೊರತೆ ಉಂಟು ಮಾಡುತ್ತವೆ.

■ ಕಬ್ಬಿಗೆ ನೀರನ್ನು ಹಾಯಿಸುವಾಗ ಪ್ರತಿಸಲ ದನಗಳ ಗಂಜಲ ಹಾಗೂ ಸಗಣಿ ನೀರಿನೊಂದಿಗೆ ಕರಗಿಸಿ ಬಿಡಬೇಕು. ಈ ಕ್ರಮವು ಕಬ್ಬಿಗೆ ಅವಶ್ಯವಿರುವ ಪೋಷಕಾಂಶಗಳನ್ನು ಒದಗಿಸುವ ಶ್ರೇಷ್ಠ ಮಾರ್ಗವಾಗಿದೆ.

■ ಕಬ್ಬಿಗೆ ದೀರ್ಘಾವಧಿಯವರೆಗೆ ಸಾರಜನಕ ಮತ್ತು ಪೋಟ್ಯಾಷ್ ಗೊಬ್ಬರ ಪೂರೈಸುವುದರಿಂದ ಕಬ್ಬಿನಲ್ಲಿ ಬೆಂಡಾಗುವುದಿಲ್ಲ ಹಾಗೂ ಒಳ್ಳೆಯ ಸಕ್ಕರೆ ಅಂಶವನ್ನು ಕಬ್ಬಿನಲ್ಲಿ ಕಾಪಾಡಿಕೊಳ್ಳಲು ಸಹಕಾರಿಯಾಗುತ್ತದೆ.

■ ನೀರು ಸಾಕಷ್ಟಿದೆ ಎಂದು ಕಬ್ಬಿಗೆ ಮೇಲಿಂದ ಮೇಲೆ ನೀರನ್ನು ಬಿಡಬಾರದು. ಸ್ವಲ್ಪ ಭೂಮಿ ಒಣಗಿ ಬೆಳೆಯು ಬಾಡಿದ ನಂತರ ನೀರನ್ನು ಕೊಡಬೇಕು. ಅತಿಯಾದ ನೀರಿನ ಉಪಯೋಗದಿಂದ ಕಬ್ಬಿನಲ್ಲಿ ಸಿಹಿ ಅಂಶ ಕಡಿಮೆಯಾಗಬಹುದು. ■

ಹೊಟ್ಟೆ ಉರಿ, ಗ್ಯಾಸ್, ಸಕ್ಕರೆ ಕಾಯಿಲೆ ನಿವಾರಣೆಗೆ ತಾಟಿನಿಂಗು ರಾಮಬಾಣ । ಎಳನೀರಿಗಿಂತ ಕಡಿಮೆ ದರಕ್ಕೆ ಸುಲಭವಾಗಿ ಸಿಗುವ ಸಿಹಿ ನೀರಿನ ತೊಳೆ । ರಸ್ತೆ ಬದಿಯಲ್ಲಿ ರಾಶಿಗಟ್ಟಲೆ ಮಾರಾಟಕ್ಕಿಟ್ಟ ತಾಟಿನಿಂಗು ಕಾಯಿಗಳು

ಬಾಯಾರಿಕೆ ನೀಗಿಸಿ ದೇಹ ತಣಿಸುವ ತಾಟಿನಿಂಗು

ನಿ ಸಿ.ಎಸ್.ನಾರಾಯಣಸ್ವಾಮಿ ಹೊಸಕೋಟಿ

ಬೇಸಿಗೆಯ ಬಿಸಿಲಿನ ಬೇಗೆ ಹೆಚ್ಚಾಗುತ್ತಿದಂತೆ ಜನರು ದೇಹವನ್ನು ತಂಪಾಗಿಸುಕೊಳ್ಳುವತ್ತ ಉತ್ಸುಕರಾಗಿ ತಂಪಾದ ಪಾನೀಯ ಹಣ್ಣುಗಳ ಸೇವನೆಯತ್ತ ಹೆಚ್ಚು ಆಸಕ್ತರಾಗುತ್ತಿದ್ದಾರೆ. ಮಾರುಕಟ್ಟೆ ರಸ್ತೆ ಬದಿಗಳಲ್ಲಿ ಎತ್ತ ಕಣ್ಣಾಯಿಸಿದರೂ ತಾಟಿನಿಗಿನ ದರ್ಶನವಾಗುತ್ತಿದ್ದು, ಜನರೂ ತಾಟಿನಿಂಗು ಕೊಳ್ಳುವುದರಲ್ಲಿ ನಿರತರಾಗುತ್ತಿದ್ದಾರೆ.

ಎಳ ನೀರಿನಷ್ಟೇ ಆರೋಗ್ಯಕರ ಗುಣವನ್ನು ತಾಟಿನಿಂಗು ಹಣ್ಣು ಸಹ ಹೊಂದಿದೆ. ತಾಟಿನಿಗಿನ ತೊಳೆಗಳು ಸಾಕಷ್ಟು ಪ್ರಮಾಣದ ಶರ್ಕರ, ರಂಜಕ, ಕಬ್ಬಣ, ವಿಟಮಿನ್ ಸಿ ಯಿಂದ ಕೂಡಿದೆ. ಬಿಸಿಲ ತೀವ್ರತೆಯು ಏರುತ್ತಿರುವುದರಿಂದ ಜನರಿಗೆ ದಾಹ ಹೆಚ್ಚಾಗುತ್ತಿದ್ದು, ಇದು ದೇಹದ ಉಷ್ಣತೆಯನ್ನು ಕಡಿಮೆ ಮಾಡುವುದು. ಎಳ ನೀರಿಗೆ ಪರ್ಯಾಯವಾಗಿ ತಾಟಿನಿಂಗು ಗ್ರಾಹಕರ ಬೇಡಿಕೆ ಹೆಚ್ಚಾಗುತ್ತಿದೆ.

ಬೇಸಿಗೆಯಲ್ಲಿ ಬಾಯಾರಿಕೆ ನೀಗಿಸುವುದಲ್ಲಿ ಎಳನೀರು ಹಾಗೂ ತಾಟಿನಿಂಗು ಸಹಕಾರಿಯಾಗಿದೆ. ಎಳನೀರಿಗಿಂತ ಕಡಿಮೆ ದರಕ್ಕೆ ಸುಲಭವಾಗಿ ತಾಟಿನಿಂಗು ಬಡವರ ಕೈಗೆ ಎಟುಕುತ್ತದೆ, ಇದು



ಹೊಸಕೋಟೆಯಲ್ಲಿ ರಾಶಿಗಟ್ಟಲೇ ತಾಟಿನಿಂಗು ಕಾಯಿಗಳು ತಮಿಳು ನಾಡಿನಿಂದ ಮಾರಾಟಕ್ಕೆ ರವಾನೆಯಾಗಿರುವುದು.



ತಮಿಳುನಾಡಿನಿಂದ ನಾಲ್ಕೈದು ವ್ಯಾಪಾರಸ್ಥರು ಸೇರಿ ಒಟ್ಟಾಗಿ ವಾರಕ್ಕೆ ಒಂದು ಲೋಡ್ ಲಾರಿಯಲ್ಲಿ ತಾಟಿನಿಂಗು ಕಾಯಿಗಳನ್ನು ತರುಸಲಾಗು ವುದು. ತಳ್ಳು ಗಾಡಿಗಳನ್ನು ಬಾಡಿಗೆಗೆ ಪಡೆದು ವ್ಯಾಪಾರ ಮಾಡುತ್ತೆವೆ. ಒಂದು ಕಾಯಿಗೆ 5 ರಿಂದ 6 ರು. ಲಾಭ ಸಿಗುವುದು. ದಿನವೊಂದಕ್ಕೆ ಖರ್ಚು ಕಳೆದು 400ರು.ಗಳವರೆಗೆ ಲಾಭ ಸಿಗುತ್ತದೆ. ಬೇಸಿಗೆ ಹೆಚ್ಚಿದಷ್ಟು ಈ ಕಾಯಿಗೆ ಬೇಡಿಕೆ ಹೆಚ್ಚಾಗುತ್ತದೆ.
-ಆಯ್ಯಪ್ಪ ವ್ಯಾಪಾರಿ

ಹಲವಾರು ದಿನಗಳಿಂದ ತಾಟಿನಿಂಗು ಕಾಯಿಗೆ ಬೇಡಿಕೆಯೇ ಇರದೇ, 10 ರು.ಗೆ ಕಾಯಿ ಸಿಗುತ್ತಿತ್ತು. ಬಿಸಿಲಿನ ತಾಪ ಹೆಚ್ಚಾದ್ದರಿಂದ, ಈ ಕಾಯಿಗೆ ಹೆಚ್ಚಿನ ಬೇಡಿಕೆಯಾಗಿ ಈಗ 30 ರು.ಗಳಿಗೆ ಏರಿಕೆಯಾಗಿ ಮಾರಾಟವಾಗುತ್ತಿದೆ. ಪ್ರತಿ ವರ್ಷ ಬೇಸಿಗೆಯಲ್ಲಿ ತಪ್ಪದೇ ತಾಟಿನಿಂಗು ಹಣ್ಣನ್ನು ಸವಿಯುತ್ತೇನೆ.
-ಮೃತ್ಯುಂಜಯ ಗ್ರಾಹಕ

ದೇಹವನ್ನು ತಂಪಾಗಿಸುತ್ತದೆ. ಕೃತಕ ತಂಪು ಪಾನೀಯಗಳನ್ನು ಕುಡಿದು ಆರೋಗ್ಯ ಹಾಳು ಮಾಡಿಕೊಳ್ಳುವುದರ ಬದಲಾಗಿ ಪ್ರಕೃತಿದತ್ತವಾಗಿರುವ ಹಣ್ಣು ಕಾಯಿಗಳಗಳನ್ನು ಸೇವಿಸುವುದರಿಂದ ಆರೋಗ್ಯವನ್ನು ಕಾಪಾಡಿಕೊಂಡು ರೋಗ ಮುಕ್ತರಾಗಲು ಸಹಕಾರಿಯಾಗುತ್ತದೆ.

ತಮಿಳು ನಾಡಿನ ಸೇಲಂ, ಧರ್ಮಪುರಿ, ಹೊಸೂರು, ಪುತ್ತಕೂರು ಈ ಭಾಗಗಳಲ್ಲಿ ಹೇರಳವಾಗಿ ತಾಟಿನಿಂಗನ್ನು ಬೆಳೆಯುತ್ತಾರೆ. ಬೇಸಿಗೆಯ ಪ್ರಾರಂಭ ದಿನಗಳಿಂದ ನಿಧಾನವಾಗಿ ಮಾರುಕಟ್ಟೆಗಳಲ್ಲಿ ಲಗ್ಗೆ ಇಡುತ್ತದೆ. ಮಾರ್ಚ್, ಏಪ್ರಿಲ್ ಹಾಗೂ ಮೇ ತಿಂಗಳಲ್ಲಿ ತಮಿಳು ನಾಡಿನ ಮೂಲಕ ತಾಳೆಹಣ್ಣು (ತಾಟಿನಿಂಗು) ಮಾರುಕಟ್ಟೆಗೆ ರವಾನೆಯಾಗಿ ಮಾರಾಟ ಮಾಡಲಾಗುತ್ತದೆ.

ಈ ಹಣ್ಣು ಸೇವಿಸಿದರೆ ಹೊಟ್ಟೆ ಉರಿ, ಗ್ಯಾಸ್ ಸಮಸ್ಯೆಗಳಿಗೆ ರಾಮಬಾಣವಾಗಿದೆ. ಸಕ್ಕರೆ ಕಾಯಿಲೆ ಇರುವವರಿಗೆ ಇದೊಂದು ದಿವ್ಯ ಔಷಧಿಯಾಗಿದೆ. ಸಣ್ಣ ಗಾತ್ರದ ಎಳನೀರಿನ ಕಾಯಿಯಂತೆ ಕಂಡರೂ, ಇದರ ಒಳಗೆ ಎಳೆ ಕೊಬ್ಬರಿ ಯಂತೆ 3 ರಿಂದ 4 ತೊಳೆಗಳು ಇರುವುದು. ಇದನ್ನು ತಿಂದರೆ ಎಳನೀರಿನ ಗಂಜಿಯನ್ನು ಸವಿದಂತೆ ಅನುಭವ ಉಂಟಾಗುತ್ತದೆ. ಇದರಲ್ಲಿರುವ ನೀರು ಸಿಹಿಯಾಗಿರುವುದು. ಅದಕ್ಕಾಗಿಯೇ ಜನರು ಬೇಸಿಗೆ ಯಲ್ಲಿ ಬಹಳ ಇಷ್ಟ ಪಟ್ಟು ಕೊಳ್ಳುತ್ತಾರೆ.

ತಮಿಳು ನಾಡಿನಲ್ಲಿ ಹೆಚ್ಚಾಗಿ ಬೆಳೆಯುವ ತಾಟಿನಿಂಗು ಹಣ್ಣು ಬೇಸಿಗೆಯಲ್ಲಿ ಬಹು ಬೇಡಿಕೆಯ ವಸ್ತುವಾಗಿ ಮಾರಾಟವಾಗುತ್ತಿದೆ. ಈ ಹಣ್ಣುಗಳ ಬೀದಿಗಳಲ್ಲಿ ರಸ್ತೆ ಬದಿ ತಳ್ಳು ಗಾಡಿಗಳ ಮೇಲೆ ವ್ಯಾಪಾರ ಜೋರಾಗಿದೆ. 35 ಕಾಯಿಗಳು ಇರುವ ಒಂದು ಗೊಂಚಲಿಗೆ 250 ರಿಂದ 300 ರು. ಗಳಿಗೆ ಖರೀದಿಸುತ್ತಿದ್ದೇವೆ. ಒಂದು ಕಾಯಿಯನ್ನು 30 ರು.ಗೆ ಮಾರಾಟ ಮಾಡುತ್ತೇವೆ ಎಂದು ವ್ಯಾಪಾರಸ್ಥರು ಹೇಳುತ್ತಾರೆ.

ಸಾಮಾನ್ಯವಾಗಿ ಕರಾವಳಿ ಪ್ರದೇಶಗಳಲ್ಲಿ ಬೆಳೆಯುವ ತಾಟಿಯಿಂದ ಬೆಲ್ಲವನ್ನು ತಯಾರಿಸುತ್ತಾರೆ. ಈ ಬೆಲ್ಲದಲ್ಲಿ ಔಷಧೀಯ ಗುಣವಿದೆ.

ಇದರಲ್ಲಿ ಪೊಟಾಷಿಯಂ ಮತ್ತು ನಾರಿನ ಅಂಶವು ಹೆಚ್ಚಾಗಿದೆ. ಇದನ್ನು ಪಾಮ್ ಫ್ರೋಟ್ಸ್ ಎಂದು ಸಹ ಕರೆಯುತ್ತಾರೆ. ಇದು ಕಿಡ್ನಿಯಲ್ಲಿರುವ ಕಲ್ಲುಗಳ ನಿವಾರಣೆಗೆ ತುಂಬಾ ಸಹಕಾರಿಯಾಗಿದೆ. ಬಾಣಂತಿಯರು, ಮುಟ್ಟಿನ ತೊಂದರೆ ಇರುವ ಮಹಿಳೆಯರು ಇದನ್ನು ಸೇವಿಸುವುದರಿಂದ ಸಮಸ್ಯೆಯಿಂದ ಮುಕ್ತರಾಗಬಹುದು ಎಂದು ಆಯುರ್ವೇದ ಪಂಡಿತರು ಹೇಳುತ್ತಾರೆ.

19-04-2021 Vsv Pg 12

For more information visit
University Library Website
Web - uasbagrilibindia.org
E-mail- librarian@uasbangalore.edu.in

19-04-2021 Uv Pg 09